

# ಹೊಳೆವ ಮಾಣಿಕ್ಯ ಸೆಳೆವ ಮನ!

**ರೂಬಿ ಹರಳುಗಳನ್ನು ಚಿನ್ನದಲ್ಲಿ ಕೂರಿಸಿ ಮಾಡಿದ ಒಡವೆಗಳು ಅತ್ಯಾಕರ್ಷಕ. ಅದು ನೆಕ್ಲೇಸ್ ಆಗಿರಲಿ, ಕಿವಿಯೋಲೆ, ಉಂಗುರ, ಪೆಂಡೆಂಟ್, ಬ್ರೇಸ್ಲೆಟ್, ಬಳೆಯೇ ಆಗಿರಲಿ, ಒಡವೆ ಸಖತ್ ಲುಕ್ ಕೊಡುತ್ತದೆ. ರೂಬಿ ಹರಳು ಇಡೀ ಆಭರಣದ ಚೆಲುವು, ಸೊಬಗನ್ನೇ ಇಮ್ಮಡಿಸಬಲ್ಲದು.**

**■ ಉಮಾ ಅನಂತ್**

ಕೆಂಪು– ಗುಲಾಬಿ ಮಿಶ್ರಿತ ರೂಬಿ (ಮಾಣಿಕ್ಯ) ಹರಳಿನ ಒಡವೆ ನೋಡಲು ಬಹಳ ಆಕರ್ಷಕ. ಒಂದೇ ಒಂದು ನೆಕ್ಲೇಸ್ ತೊಟ್ಟರೂ ಎದ್ದುಕಾಣುವಂಥ ಗುಣ ರೂಬಿ ಆಭರಣದ್ದು. ಒಡವೆ ಪ್ರಪಂಚದಲ್ಲಿ ರೂಬಿ ಹರಳು ಇಷ್ಟು ಜನಪ್ರಿಯತೆ ಗಳಿಸಿದ್ದು ಹೇಗೆ? ಅಲ್ಲದೆ ಎವರ್‌ಗ್ರೀನ್ ಟ್ರೆಂಡ್ ಆಗಿ ಫ್ಯಾಷನ್ ಪ್ರಪಂಚದಲ್ಲಿ ಮೆರೆಯುತ್ತಿರುವುದಕ್ಕೆ ಕಾರಣಗಳಾದರೂ ಏನು?

ಹರಳಿನ ಒಡವೆಗಳು ಸಾಮಾನ್ಯವಾಗಿ ಎಲ್ಲ ಮಹಿಳೆಯರ ಮೆಚ್ಚು. ಇಂತಹ ಒಡವೆಗಳು ನೋಡಲು ಸಖತ್ ಲುಕ್ ಕೊಡುವುದಲ್ಲದೆ ಎಲ್ಲ ರೀತಿಯ ಉಡುಗೆಗಳಿಗೂ ಮ್ಯಾಚ್ ಮಾಡಿಕೊಳ್ಳಬಹುದು. ಹವಳ, ಅಮೆರಿಕನ್ ಡೈಮಂಡ್, ಜೇಡ್, ನೀಲ, ಪಚ್ಚೆ ಹರಳುಗಳ ಒಡವೆಗಳು 'ಮಿಕ್ಸ್ ಅಂಡ್ ಮ್ಯಾಚ್'ಗೆ ಹೇಳಿ ಮಾಡಿಸಿದವು. ಇವುಗಳ ಸಾಲಿಗೆ ಸೇರುವ ಮತ್ತೊಂದು ಆಕರ್ಷಕ ಹರಳು ರೂಬಿ.

ರೂಬಿ ಅಥವಾ ಮಾಣಿಕ್ಯ ಸೇರಿಸಿದ ಒಡವೆ ಫ್ಯಾಷನಬಲ್ ಅಲ್ಲದೆ ಸಾಮಾನ್ಯವಾಗಿ ಎಲ್ಲ ರೀತಿಯ ಉಡುಗೆಗಳಿಗೂ ಸೂಕ್ತವಾದವು. ಇದೀಗ ಕಂಟೆಂಪರರಿ ಸ್ಟೈಲ್‌ನ ಹರಳುಗಳಿರುವ ಆಭರಣಗಳನ್ನು ಧರಿಸುವುದು ಕೂಡ ಫ್ಯಾಷನ್ ಆಗಿದೆ. ಒಂದೇ ಒಂದು ರತ್ನ ಖಚಿತ ಆಭರಣ ಅಥವಾ ಒಂದಕ್ಕಿಂತ ಹೆಚ್ಚು ಹರಳುಗಳಿರುವ ಆಭರಣಗಳು ಕೂಡಾ ಫ್ಯಾಷನ್ ಸ್ಟೇಟ್‌ಮೆಂಟ್ ಕೊಡಬಲ್ಲವು.

ರೂಬಿ ಹರಳುಗಳನ್ನು ಚಿನ್ನದಲ್ಲಿ ಕೂರಿಸಿ ಮಾಡಿದ ಒಡವೆಗಳು ಅತ್ಯಾಕರ್ಷಕ. ಅದು ನೆಕ್ಲೇಸ್ ಆಗಿರಲಿ, ಕಿವಿಯೋಲೆ, ಉಂಗುರ, ಪೆಂಡೆಂಟ್, ಬ್ರೇಸ್ಲೆಟ್, ಬಳೆಯೇ ಆಗಿರಲಿ, ಸಖತ್ ಲುಕ್ ಕೊಡುತ್ತದೆ. ರೂಬಿ ಹರಳು ಇಡೀ ಆಭರಣದ ಚೆಲುವು, ಸೊಬಗನ್ನೇ ಇಮ್ಮಡಿಸಬಲ್ಲದು.

ಹಾಗೆ ನೋಡಿದರೆ ರೂಬಿ ಇತರ ಸಾಮಾನ್ಯ ಹರಳುಗಳಿಗಿಂತಲೂ ಬಹಳ ದುಬಾರಿ. ಇದು ಅಲ್ಯುಮಿನಿಯಂ ಆಕ್ಸೈಡ್‌ನ ಒಂದು ವಿಧ